ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರ ಒಟ್ಟು 7.20 ಲಕ್ಷ ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಿದೆ.

ಆ) ಅನುಬಂಧ–1ರಲ್ಲಿ ಲಗತ್ತಿಸಿದೆ.

ಇ) ಅನುಬಂಧ–2ರಲ್ಲಿ ಮಾಹಿತಿ ಲಭ್ಯವಿದೆ.

ಈ) ಬಂದಿದೆ.

ಉ) ಮೂರು ಪ್ರಕರಣಗಳಲ್ಲಿ ದುರುಪಯೋಗವಾಗಿರುವುದು ಗಮನಕ್ಕೆ ಬಂದಿದೆ.

ಊ) ತಪ್ಪಿತಸ್ಥರನ್ನು ವಿಚಾರಣೆ ಕಾಯ್ದೆರಿಸಿ ಸೇವೆಯಿಂದ ಅಮಾನತ್ತು ಮಾಡಲಾಗಿದೆ.

ರಾಜ್ಯದ ಬರ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ

2451 (3215) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬರ ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು;

ಆ) ಈ ಹಣವನ್ನು ಯಾವ ಯಾವ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಇ) ಬಿಡುಗಡೆ ಮಾಡಿರುವ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಈ) ಈ ಹಣವನ್ನು ಅಧಿಕಾರಿಗಳು ದುರುಪಯೋಗಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ದುರುಪಯೋಗ ಪಡಿಸಿಕೊಂಡಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು?

ಉ) ಈ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರವು 2002–03 ನೇ ಸಾಲಿನಲ್ಲಿ ಸಿ ಆರ್ ಎಫ್ ನಿಧಿಯಲ್ಲಿ ರೂ. 61.66 ಕೋಟಿ ಮತ್ತು ಎನ್.ಸಿ.ಸಿ.ಎಫ್ ನಿಧಿಯಡಿಯಲ್ಲಿ ರೂ. 196.88 ಕೋಟಿ 2003–04ನೇ ಸಾಲಿನಲ್ಲಿ ಎನ್.ಸಿ.ಸಿ.ಎಫ್ ನಿಧಿಯಡಿಯಲ್ಲಿ ರೂ. 10.77 ಹಾಗೂ ಸಿ ಆರ್ ಎಫ್ ನಿಧಿಯಲ್ಲಿ ರೂ. 32.37 ಕೋಟಿಯನ್ನು ಬಿಡುಗಡೆ ಮಾಡಿದೆ.

ಆ) ಪಟ್ಟಿಯನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಇ) ಮಾಹಿತಿ ಅನುಬಂಧ–1ರಲ್ಲಿದೆ

ಈ) ಇಲ್ಲ

ಉದ್ಭವಿಸುವುದಿಲ್ಲ.

ಉ) ಉದ್ಯೋಗ ಸೃಜನೆ ಕಾಮಗಾರಿಗಳಡಿಯಲ್ಲಿ ಜಲ ಸಂರಕ್ಷಣೆ ಮತ್ತು ಜಲಾನಯನ ಅಭಿವೃದ್ಧಿ ಕಾಮಗಾರಿಗಳಲ್ಲಿ ಭೂಸಾರ ಸಂರಕ್ಷಣ ಕಾಮಗಾರಿಗಳು, ಆಸ್ತಿ ನಿರ್ಮಾಣ ಕಾಮಗಾರಿಗಳು ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

Annexure I

Releases & Expenditure during 2002-03 & 2003-04 under CRF/NCCF

Sl. No.	Name of the District	Releases	Expenditure	Releases	Expenditure
1	2	3	4	5	6
1	Bangalore (U)	273.84	213.74	202.95	222.25
2	Bangalore (R)	626.89	403.36	448.75	456.22
3	Kolar	887.93	967.55	645.02	463.29
4	Tumkur	704.10	516.88	535.00	600.21
5	Chitradurga	556.45	761.71	356.75	253.68
6	Davanagere	608.30	609.00	371.50	179.26
7	Shimoga	631.65	510.74	372.85	353.63
8	Mysore	572.80	426.53	378.80	278.44
9	Chamarajanagar	382.45	261.05	264.07	123.15
10	Mandya	539.35	284.93	366.00	483.17
11	Chikmagalur	512.70	443.69	319.82	240.08
12	Hassan	637.10	681.48	504.87	422.56
13	Kodagu	52.90	283.24	114.00	112.55
14	D.Kannada	152.00	150.51	60.00	29.00
15	Udupi	102.00	74.66	35.00	29.87
16	Gulbarga	1036.00	74.66	35.00	29.87
17	Bidar	395.10	492.13	282.38	311.63
18	Raichur	474.10	412.59	296.25	151.60
19	Koppal	426.15	523.64	264.25	181.72
20	Bellary	640.65	674.39	441.58	310.52
21	Belgaum	990.30	941.19	824.25	608.04
22	Bijapur	427.40	537.66	288.80	275.59
23	Bagalkote	475.60	264.94	346.63	69.92
24	Dharwar	505.70	394.57	272.80	69.92
25	Gadag	507.30	470.68	307.75	245.43
26	Haveri	694.05	794.48	404.45	264.50
27	Uttara Kannada	511.20	573.48	322.38	196.36

1	2	3	4	5	6
28	RDED	255.00	254.47	0.00	0.00
29	B'lore City Corpn.	50.00	50.00	0.00	
30	Director, Agrl. Dept.	1285.00	0.00	1000.00	0.00
31	Director, Hort. Dept.	15.00	0.00	0.00	0.00
32	Director, DMC	0.00	15.00	25.00	0.00
33	Int. Subsidy, Apex Bank	3300.00	0.00	0.00	0.00
	Total	**19231.00**	**13936.52**	**10640.28**	**7883.48**

ರಾಜ್ಯದಲ್ಲಿ ಧಾರ್ಮಿಕ ಏಕರೂಪ ಶಾಸನ

2452 (3216) : ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಧಾರ್ಮಿಕ ಏಕರೂಪ ಶಾಸನವನ್ನು ಜಾರಿಗೊಳಿಸಲಾಗಿದೆಯೇ;

ಆ) ಹಾಗಿದ್ದರೆ, ಧಾರ್ಮಿಕ ಏಕರೂಪ ಶಾಸನದ ರೂಪು ರೇಷೆಗಳೇನು; (ವಿವರ ನೀಡುವುದು)

ಇ) ಇದರಿಂದ ತಲತಲಾಂತರಗಳಿಂದ ಅರ್ಚಕರಾಗಿ, ಟ್ರಸ್ಟಿಗಳಾಗಿ, ದೇವಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಚಕರಿಗೆ ತೊಂದರೆಯಾಗಿರುವುದಿಲ್ಲವೇ;

ಈ) ಹಾಗಿದ್ದಲ್ಲಿ, ಈ ಶಾಸನವನ್ನು ಮರುಪರಿಶೀಲನೆ ಮಾಡಲಾಗುವುದೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) ಹೌದು

ಆ) ಏಕರೂಪ ಶಾಸನದ ರೂಪು ರೇಷೆಗಳ ವಿವರಗಳನ್ನು ಅನುಬಂಧ–Iರಲ್ಲಿ ನೀಡಿದೆ.

ಇ) ಅರ್ಚಕರ ನಿವೃತ್ತಿ ವಯಸ್ಸನ್ನು 65 ವರ್ಷಕ್ಕೆ ಹಾಗೂ ಅರ್ಚಕರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ವ್ಯವಸ್ಥಾಪನಾ ಸಮಿತಿಗೆ ಅಧಿಕಾರವನ್ನು ನಿಯಮಗಳಲ್ಲಿ ನೀಡಲಾಗಿದೆ ಈ ನಿಯಮಗಳ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 26504, 26544–26547/2003ಗಳನ್ನು ಸಲ್ಲಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು ದಿ: 09.6.2003 ರಂದು ತಡೆಯಾಜ್ಞೆ ನೀಡಿರುತ್ತದೆ. ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

ದೇವಸ್ಥಾನದ ಅನುವಂಶಿಕ ಟ್ರಸ್ಟಿಗಳು ನಡೆಸುತ್ತಿರುವ ದೇವಸ್ಥಾನಗಳಿಗೆ ವ್ಯವಸ್ಥಾಪನಾ ಸಮಿತಿ 9 ಸದಸ್ಯರನ್ನುಳ್ಳ ವ್ಯವಸ್ಥಾಪಕ ಸಮಿತಿ ರಚಿಸಲು ಏಕರೂಪ ಶಾಸನದಲ್ಲಿ ಅವಕಾಶ ಕಲ್ಪಿಸಿರುವುದನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 29805/2003ನ್ನು ಸಲ್ಲಿಸಿ ದಿ: 1.7.2003 ರಂದು ತಡೆಯಾಜ್ಞೆ ಪಡೆದಿರುತ್ತಾರೆ. ಪ್ರಕರಣವು ಇತ್ಯರ್ಥಕ್ಕಾಗಿ ನ್ಯಾಯಾಲಯದಲ್ಲಿ ಬಾಕಿ ಇದೆ.

ಈ) ಸದ್ಯಕ್ಕೆ ಉದ್ಭವಿಸುವುದಿಲ್ಲ.